ಸುದ್ದಿ ಸಿಂಚನ

ಶಿರಾ ತಾಲೂಕಿನ 63 ಕೆರೆಗಳಿಗೆ ನೀರು ಹರಿಸಿ

ಶಿರಾ: ರೈತರ ಹಿತಾಸಕ್ತಿ ಪರಿಗಣಿಸಿ ಭದ್ರಾ ಮೇಲ್ದಂಡೆ ಯೋಜನೆಯಡಿ ಶಿರಾ ತಾಲೂಕಿನ 63 ಕೆರೆಗಳಿಗೆ ತಕ್ಷಣ ನೀರು ಹರಿಸಲು ಮಾಜಿ ಶಾಸಕ ಡಾ.ಸಿ.ಎಂ. ರಾಜೇಶ್ ಗೌಡ ಅವರು ಸರ್ಕಾರವನ್ನು ಒತ್ತಾಯಿಸಿರುವುದು ಸ್ವಾಗತಾರ್ಹ ಎಂದು ಕೃಷಿ ವಿಶ್ವವಿದ್ಯಾಲಯ ಜಿ.ಕೆ.ವಿ.ಕೆ. ಬೆಂಗಳೂರಿನ ನಿವೃತ್ತ ಪ್ರಾಧ್ಯಾಪಕ ಎಸ್.ಎಲ್. ಮೋಹನ್ ತಿಳಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿ, ಅತ್ಯಂತ ಫಲವತ್ತಾದ ಮರಳು ಮಿಶ್ರಿತ ಕೆಂಪು ಭೂಮಿಯನ್ನು ಹೊಂದಿರುವ ಶಿರಾತಾಲೂ ಕಿನ ರೈತರಿಗೆ ಭದ್ರಾ ಮೇಲ್ದಂಡೆ ಯೋಜನೆ ವರಪ್ರಸಾದವಾಗಲಿದೆ. ಈ ಬಗ್ಗೆ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು, ಆದ್ಯತೆ ಮೇರೆಗೆ ಕ್ರಮಕ್ಕೆ ಮೋಹನ್ ಅವರು ಒತ್ತಾಯಿಸಿದ್ದಾರೆ.

ಭದ್ರಾ, ಎತ್ತಿನಹೊಳೆ ಕಾಮಗಾರಿ ಶೀಘ್ರ ಮುಗಿಸಿ

ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ ಆಗ್ರಹ | ಜೆಡಿಎಸ್, ಬಿಜೆಪಿ ಕಾರ್ಯಕರ್ತರಿಂದ ಬೃಹತ್ ಪ್ರತಿಭಟನಾ ಮೆರವಣಿಗೆ

• **ಕನ್ನಡಪ್ರಭ ವಾರ್ತೆ** ಪಾವಗಡ

ಪಾವಗಡ ತಾಲೂಕು ತೀವ್ರ ಬರಪೀಡಿತ ಪ್ರದೇಶವಾಗಿದ್ದು, ಭದ್ರಾ ಮೇಲ್ದಂಡೆ ಹಾಗೂ ಎತ್ತಿನಹೊಳೆ ಯೋಜನೆಯಿಂದ ತಾಲೂಕಿನ ಕೆರೆಗಳಿಗೆ ನೀರು ಸಂಗ್ರಹಿಸುವ ಹಿನ್ನೆಲೆಯಲ್ಲಿ ತ್ವರಿತ ಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕೆಂದು ಮಾಜಿ ಶಾಸಕ ಕೆ.ಎಂ.ತಿಮ್ಮರಾಯಪ್ಪ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದರು.

ತಾಲೂಕಿನ ಜ್ವಲಂತ ಸಮಸ್ಯೆಗಳ ಹಿನ್ನೆಲೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿಯಿಂದ ಸೋಮವಾರ ಪಟ್ಟಣದಲ್ಲಿ ನಡೆಸಿದ ಬೃಹತ್ ಪ್ರತಿಭಟನಾ ಮೆರವಣಿಗೆ ಸಂದರ್ಭದಲ್ಲಿ ಮಾತನಾಡಿದ ತಾಲೂಕು ಜೆಡಿಎಸ್ ಹಿರಿಯ ಮುಖಂಡರೂ ಆದ ತಿಮ್ಮರಾಯಪ್ಪ, ಪಾವಗಡ ತಾಲೂಕು ನಿರಂತರ ಬರಗಾಲದಿಂದ ತತ್ತರಿಸುತ್ತಿದೆ. ಸರ್ಕಾರ ಕೂಡಲೇ ಭದ್ರಾ ಮೇಲ್ದಂಡೆ ಮತ್ತು ಎತ್ತಿನಹೊಳೆ ನೀರನ್ನು ಪಾವಗಡಕ್ಕೆ ಹರಿಸಬೇಕು. ಸ್ಥಳೀಯ ಪೊಲೀಸರು ಬಿಜೆಪಿ, ಜೆಡಿಎಸ್ ಕಾರ್ಯಕರ್ತರ ವಿರುದ್ಧ ದಾಖಲಿಸಿರುವ ಸುಳ್ಳು ಕೇಸು ವಾಪಸ್ ಪಡೆಯಬೇಕು ಎಂದು ಅವರು ಆಗ್ರಹಿಸಿದರು.

ರಾಜ್ಯದಲ್ಲಿ ಗುಟ್ಕಾ ನಿಷೇಧ ಕೂಡಲೇ ಹಿಂಪಡೆಯಬೇಕು. ಸೋಲಾರ್ ಕಂಪನಿಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಅವಕಾಶ ನೀಡಬೇಕು. ರೈತರಿಗೆ 7 ಗಂಟೆ ನಿರಂತರ ವಿದ್ಯುತ್ ನೀಡಬೇಕು. ಭೂಸೇನೆ ನಿಗಮ ದಿಂದ ಕೈಗೊಂಡ ಕಾಮಗಾರಿಗಳು ಕಳಪೆಯಿಂದ ಕೂಡಿದ್ದು, ಸಮಗ್ರ ತನಿಖೆಯಾಗಬೇಕು ಎಂಬುದು ಸೇರಿ ತಮ್ಮ ಹಲವು ಬೇಡಿಕೆ ಈಡೇರಿಸಲು ಆಗ್ರಹಿಸಿದರು.

ತಾಲೂಕು ಬಿಜೆಪಿ ಅಧ್ಯಕ್ಷ ಡಿ.ಆರ್.ಅಶೋಕ್ ಮಾತನಾಡಿ, ಸಿಎಂ ಡಿ.ಕೆ.ಶಿವಕುಮಾರ್ ಅವರಿಂದ ಅಭಿವೃದ್ಧಿ ನಿರೀಕ್ಷಿಸಲು ಸಾಧ್ಯವಿಲ್ಲ ಎಂದರಲ್ಲದೆ, ಎನ್‌ಡಿಎ ಕಾರ್ಯಕರ್ತರ ಮೇಲೆ ವಿನಾ ಕಾರಣ ಕೇಸು ದಾಖಲಿಸಿದರೆ ಪರಿಣಾಮ ಎದುರಿಸಬೇಕಿದೆ ಎಂದು ಎಚ್ಚರಿಸಿದರು. ರಾಜ್ಯ ಜೆಡಿಎಸ್ ಉಪಾಧ್ಯಕ್ಷ ಎನ್. ತಿಮ್ಮಾರೆಡ್ಡಿ, ಮಾಜಿ ಜಿಲ್ಲಾಧ್ಯಕ್ಷ ಆರ್.ಸಿ. ಅಂಜಿನಪ್ಪ, ಕಾರ್ಯಾಧ್ಯಕ್ಷ ಗೋವಿಂದಬಾಬು ಮಾತನಾಡಿದರು.

ತಹಸೀಲ್ದಾರ್ ವೈ. ರವಿ ಮನವಿ ಸ್ವೀಕರಿಸಿದರು. ತಾಲೂಕು ಜೆಡಿಎಸ್ ಹಿರಿಯ ಮುಖಂಡರಾದ ಬಲರಾಮರೆಡ್ಡಿ, ಕಾರ್ಯಾಧ್ಯಕ್ಷ ಸೊಗಡು ವೆಂಕಟೇಶ್, ಮುಖಂಡರಾದ ಅಕ್ಕಲಪ್ಪ ನಾಯ್ಡು, ರೈತ ಘಟಕದ ಗಂಗಾಧರ್ ನಾಯ್ಡು, ಗುಟ್ಟಹಳ್ಳಿ ಮಣಿ, ಜಿ.ಎ. ವೆಂಕಟೇಶ್, ಬಿಜೆಪಿ ಪಾವಗಡ ರವಿ, ಎನ್.ರಾಮಕೃಷ್ಣ ರೆಡ್ಡಿ, ಜಿ.ಎನ್. ನಲ್ಲಪ್ಪ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ಭರತ್ ಕುಮಾರ್, ಅಪ್ಪಾಜಿಹಳ್ಳಿ ಎಲ್. ನಾರಾಯಣರೆಡ್ಡಿ, ಮಾಜಿ ತಾಪಂ ಅಧ್ಯಕ್ಷ ರಾಜ್ ಗೋಪಾಲ್, ನಗರ ಘಟಕದ ಅಪ್ ಬಂಡೆ ಗೋಪಾಲ್, ಕಾವಲಗೆರೆ ರಾಮಾಂಜಿನಪ್ಪ, ಕನ್ನಮೇಡಿ ಲೋಕೇಶ್, ಅಂಬಿಕಾ ರಮೇಶ್, ಶಕುಂತಮ್ಮ ಇದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಾಲೂಕು ಜೆಡಿಎಸ್, ಬಿಜೆಪಿ ವತಿಯಿಂದ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

₹2.70 ಲಕ್ಷ ಮೌಲ್ಯದ ಶ್ರವಣ ಸಾಧನ ಉಚಿತ ವಿತರಣೆ

ಪಾವಗಡದಲ್ಲಿ ಸ್ವಾಮಿ ಜಪಾನಂದಜೀ ಮಹಾರಾಜ್ ಸೇವೆಗೆ ಸಾರ್ವಜನಿಕರಿಂದ ಅಪಾರ ಮೆಚ್ಚುಗೆ

• **ಕನ್ನಡಪ್ರಭ ವಾರ್ತೆ** ಪಾವಗಡ

ಮನುಷ್ಯ ಸೇವೆಯೇ ಮಾಧವ ಸೇವೆ ಎಂಬ ಸ್ವಾಮಿ ವಿವೇಕಾನಂದರ ಸಂದೇಶವನ್ನು ಅಕ್ಷರಶಃ ಪಾಲಿಸುತ್ತಿರುವ ಸ್ವಾಮಿ ವಿವೇಕಾನಂದ ಸಂಘಟಿತ ಗ್ರಾಮಾಂತರ ಆರೋಗ್ಯ ಕೇಂದ್ರದ ಪೂಜ್ಯ ಸ್ವಾಮಿ ಜಪಾನಂದಜೀ ಮಹಾರಾಜ್ ಅವರು ಪಾವಗಡ ತಾಲೂಕಿನ 5 ಪುಟ್ಟ ಮಕ್ಕಳ ಬದುಕಿಗೆ ಬೆಳಕಾಗಿದ್ದಾರೆ.

ಪಾವಗಡ ನಗರದ ಆರೋಗ್ಯ ಕೇಂದ್ರದ ಆವರಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರಿನ ಡಾ.ಎಸ್.ಆರ್. ಚಂದ್ರಶೇಖರ್‌ವಾಕ್ ಮತ್ತು ಶ್ರವಣ ಸಂಸ್ಥೆ ಸಹಕಾರದೊಂದಿಗೆ ಒಂದು ಕಿವಿಗೆ 30,000 ಬೆಲೆಬಾಳುವ ಅತ್ಯಾಧುನಿಕ ಶ್ರವಣ ಸಾಧನಗಳನ್ನು ಉಚಿತವಾಗಿ ವಿತರಿಸಿದರು. ನಾಲ್ಕು ಮಕ್ಕಳ ಎರಡೂ ಕಿವಿಗೆ ಮತ್ತು ಒಂದು ಮಗುವಿನ ಒಂದು ಕಿವಿಗೆ ಸೇರಿ ಒಟ್ಟು 2.70 ಲಕ್ಷ ರು. ಮೌಲ್ಯದ 9 ಸಾಧನಗಳನ್ನು ವಿತರಿಸಲಾಯಿತು. ಸಾನ್ನಿಧ್ಯ ವಹಿಸಿದ್ದ ಸ್ವಾಮಿ ಜಪಾನಂದಜೀ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ಪಾವಗಡ ತಾಲೂಕಿನ ಕಂದಮ್ಮಗಳಿಗೆ ಹೊಸ ಜೀವನ ಜ್ಯೋತಿ ನೀಡುವುದು ನಮ್ಮ ಸಂಸ್ಥೆಯ ಧ್ಯೇಯ' ಎಂದರು.

ಮುಖ್ಯ ಅತಿಥಿಗಳಾಗಿದ್ದ ಹಿರಿಯ ವೈದ್ಯ ಡಾ.ಜಿ.ವೆಂಕಟರಾಮಯ್ಯ ಮಾತನಾಡಿ, ಕಳೆದ 40 ವರ್ಷಗಳಿಂದ ಸ್ವಾಮೀಜಿಯವರ ಸೇವಾ ಯಜ್ಞ ನೋಡುತ್ತಿದ್ದೇನೆ. ಮಾತು ಬಾರದ ಮಗು ಚಿಕಿತ್ಸೆ ನಂತರ ''''ಸ್ವಾಮೀಜಿ ಹೋಗಿ ಬರುತ್ತೇನೆ'''' ಎಂದಾಗ ಆಗುವ ಆನಂದ ಅನಿರ್ವಚನೀಯ ಎಂದು ಬಣ್ಣಿಸಿದರು. ಸಿಡಿಪಿಒ ಸುನೀತಾ ಯೋಜನೆಯನ್ನು ಶ್ಲಾಘಿಸಿದರು.

ಈ ಯೋಜನೆ ರೂವಾರಿಗಳಾದ ಡಾ.ಚಂದ್ರಕಲಾ ಜಿ.ಆರ್, ಮೇಧಾ ಹೆಗಡೆ ಮತ್ತು ತಂಡದ ತಜ್ಞರು ಮಕ್ಕಳ ಕಿವಿ ಅಳತೆ ಪಡೆದು ವೈಜ್ಞಾನಿಕವಾಗಿ ಸಾಧನ ಅಳವಡಿಸಿದರು.

ಡಾ. ಅಮ್ಮಸಂದ್ರ ಸುರೇಶ್ 'ಕೃಷಿ -ಖುಷಿ' ಕೃತಿಗೆ ಪ್ರಶಸ್ತಿ

ತುರುವೇಕೆರೆ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ನೀಡುವ ಪ್ರತಿಷ್ಠಿತ 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ-2025' ಕ್ಕೆ ತುಮಕೂರು



ಮೂಲದ ಹಿರಿಯ ಕೃಷಿ ಸಾಹಿತಿ ಡಾ. ಅಮ್ಮಸಂದ್ರ ಸುರೇಶ್ ಅವರ 'ಕೃಷಿ- ಖುಷಿ' ಕೃತಿ ಆಯ್ಕೆಯಾಗಿದೆ. ಆಧುನಿಕ ಕೃಷಿ ತಂತ್ರಜ್ಞಾನದ ಮೂಲಕ ರೈತರ ಸ್ವಾವಲಂಬನೆ ಸೇರಿದಂತೆ ವಿವಿಧ ಕೃಷಿ ಅಂಕಣಗಳ ಸಂಗ್ರಹವಾಗಿರುವ 'ಕೃಷಿ-ಖುಷಿ' ಕೃತಿಯು ಕನ್ನಡದ ಕೃಷಿ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಮಹತ್ವದ ಕೊಡುಗೆ ಎಂದು ಪರಿಗಣಿಸಿ ವಿಶ್ವವಿದ್ಯಾನಿಲಯದ ಆಯ್ಕೆ ಸಮಿತಿ ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಡಾ. ಅಮ್ಮಸಂದ್ರ ಸುರೇಶ್ ಅವರು ತುರುವೇಕೆರೆ ತಾಲೂಕಿನ ಅಮ್ಮಸಂದ್ರ ಗ್ರಾಮದವರಾಗಿದ್ದಾರೆ. ಕೃಷಿ ಪುಸ್ತಕ ಪ್ರಶಸ್ತಿಗೆ ಭಾಜನರಾಗಿರುವ ಇವರನ್ನು ಹಲವು ರೈತಪರ ಸಂಘಟನೆಗಳು ಮತ್ತು ಸಾಹಿತ್ಯ ವಲಯ ಅಭಿನಂದಿಸಿವೆ.

ಮಧುಗಿರಿಗೆ ಮುಂದಿನ ಮಾರ್ಚ್‌ಗೆ ಎತ್ತಿನ ಹೊಳೆ ನೀರು ಹರಿಸಲು ಕ್ರಮ

ಪಡಿತರ ಉಪ ಕೇಂದ್ರಕ್ಕೆ ಚಾಲನೆ ನೀಡಿದ ಶಾಸಕ ರಾಜಣ್ಣ

ಅಡವಿ ನಾಗೇನಹಳ್ಳಿ ಗ್ರಾಮದಲ್ಲಿ ಸುದ್ದೆಕುಂಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಪಡಿತರ ಉಪ ಕೇಂದ್ರಕ್ಕೆ ಶಾಸಕ ಕೆ.ಎನ್. ರಾಜಣ್ಣ ಚಾಲನೆ ನೀಡಿದರು.

• **ಕನ್ನಡಪ್ರಭಾರ್ತ** ಮಧುಗಿರಿ

ಮಧುಗಿರಿ ತಾಲೂಕಿನಲ್ಲಿ ಬಹುತೇಕ ಕೆರೆಗಳಿಗೆ ಪೈಪ್ ಲೈನ್ ಮತ್ತು ಕೆರೆ ಏರಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ಮುಂದಿನ ವರ್ಷ ಮಾರ್ಚ್ ತಿಂಗಳ ಒಳಗಾಗಿ ಎತ್ತಿನ ಹೊಳೆ ನೀರು ಹರಿಸಲು ಕ್ರಮ ವಹಿಸಲಾಗುವುದು ಎಂದು ಶಾಸಕ ಕೆ.ಎನ್. ರಾಜಣ್ಣ ಭರವಸೆ ನೀಡಿದ್ದಾರೆ.

ತಾಲೂಕಿನ ಕೊಡಗೇನಹಳ್ಳಿ ಹೋಬಳಿ ಅಡವಿನಾಗೇನಹಳ್ಳಿ ಗ್ರಾಮದಲ್ಲಿ ಸುದ್ದೆಕುಂಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಪಡಿತರ ಉಪಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮುಂದಿನ ವರ್ಷ ಕ್ಷೇತ್ರದಲ್ಲಿ ರೈಲು ಸಂಚಾರ ಪ್ರಾರಂಭವಾಗುತ್ತಿದ್ದು, ರೈತರು ಹಾಗೂ ಎಲ್ಲಾ ವರ್ಗದ ಜನರಿಗೆ ಅನುಕೂಲವಾಗಲಿದೆ. ಅಲ್ಲದೆ ಮಧುಗಿರಿ ಜಿಲ್ಲಾ ಕಂದ್ರ ಮಾಡಲು ಪ್ರಯತ್ನಿಸುತ್ತಿದ್ದು, ಜೊತೆಗೆ ಕೇಬಲ್ ಕಾರ್ ಬಂದರೆ ಮಧುಗಿರಿ ಪ್ರವಾಸೋದ್ಯಮ ಅಭಿವೃದ್ಧಿ ಆಗಲಿದೆ ಎಂದು ತಿಳಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯನವರ ಮಹತ್ವಾಕಾಂಕ್ಷಿ ಯೋಜನೆ ಅನ್ನಭಾಗ್ಯದಡಿ ರಾಜ್ಯದಲ್ಲಿ ಯಾರು ಸಹ ಹಸಿವಿನಿಂದ ಬಳಲಬಾರದೆಂಬ ದೃಷ್ಟಿಯಿಂದ ಒಬ್ಬರಿಗೆ 10 ಕೆಜಿಯಂತೆ ಉಚಿತ ಅಕ್ಕಿ ವಿತರಿಸಲಾಗುತ್ತಿದೆ. ಆಹಾರ ಪಡೆಯಲು ಈ ಗ್ರಾಮದಿಂದ ಬೇರೆ ಗ್ರಾಮಗಳಿಗೆ ಹೋಗಬೇಕಿತ್ತು. ಇದನ್ನು ಮನಗಂಡು ಇದೇ ಗ್ರಾಮದಲ್ಲಿ ಪಡಿತರ ವಿತರಣೆ ಉಪಕೇಂದ್ರ ಸ್ಥಾಪಿಸಿ ಜನರಿಗೆ ಅನುಕೂಲ ಮಾಡಿ ಕೊಡಲಾಗಿದೆ ಎಂದು ತಿಳಿಸಿದರು.

ಕಳೆದ ಬಾರಿ ಈ ಗ್ರಾಮದ ರೈತರಿಗೆ 8 ಕೋಟಿ ಕೃಷಿ ಸಾಲ ಮನ್ನಾ ಮಾಡಿದ್ದು ಈ ವರ್ಷವೂ ಉಳಿದ ರೈತರಿಗೆ ವಿಎಸ್ಎಸ್‌ಎನ್ ವತಿಯಿಂದ ಕೃಷಿ ಸಾಲ ವಿತರಿಸಲಾಗುವುದು. ಮಳೆ ಬಾರದೇ ಕ್ಷೇತ್ರದಲ್ಲಿ ಭೀಕರ ಬರಗಾಲ ಎದುರಾಗಿದ್ದು ಜನರಿಗೆ ಕುಡಿಯುವ ನೀರು, ದನ ಕರುಗಳಿಗೆ ಮೇವು, ಗೋಶಾಲೆ ಸೇರಿದಂತೆ ಎಲ್ಲಾ ರೀತಿಯಲ್ಲೂ ಬರಗಾಲ ಎದುರಿಸಲು ಸಿದ್ಧತೆ ನಡೆಸಲಾಗಿದೆ. ಯಾವುದೇ ಮಗು ಶಿಕ್ಷಣದಿಂದ ವಂಚಿತರಾಗಬಾರದೆಂದು ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ನೋಟ್ ಪುಸ್ತಕ, ಸಮವಸ್ತ್ರ, 5400 ಅಂಗನವಾಡಿ ಮಕ್ಕಳಿಗೆ ನನ್ನ ವೈಯಕ್ತಿಕ ಹಣದಲ್ಲಿ ಸಮವಸ್ತ್ರ, ಶೂ ಸಾಕ್ಸ್ ವಿತರಿಸಲಾಗಿದೆ ಎಂದರು.

ಕೆಎಂಎಫ್ ಮಾಜಿ ನಿರ್ದೇಶಕ ಕಾಂತರಾಜು ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಆದಿನಾರಾಯಣರೆಡ್ಡಿ, ಗೋಪಾಲಯ್ಯ, ವಿಎಸ್‌ಎಸ್‌ಎನ್ ಅಧ್ಯಕ್ಷ ನಂಜಪ್ಪ, ಲಾಲಪೇಟ್ ಮಂಜುನಾಥ್, ಲಕ್ಷ್ಮೀನರಸೇಗೌಡ, ಮುಖಂಡರಾದ ಕೆ ವಿ ವೆಂಕಟೇಶ್, ಶಾಮೀರ್, ಚಲಪತಿ, ವಿಎಸ್‌ಎಸ್‌ಎನ್ ಸಿಇಒ ನಾಗರಾಜ್ ನರಸಿಂಹಮೂರ್ತಿ, ಮಂಜು ಮುಂತಾದವರು ಹಾಜರಿದ್ದರು.

ಯಡಿಯೂರಿಗೆ ವಿಧಾನ ಪರಿಷತ್ ಉಪಸಭಾಪತಿ ಉಮಾಶ್ರೀ ಭೇಟಿ

• **ಕನ್ನಡಪ್ರಭ ವಾರ್ತೆ** ತುಮಕೂರು

ಜಿಲ್ಲೆ ಕುಣಿಗಲ್ ತಾಲೂಕು ಶ್ರೀಕ್ಷೇತ್ರ ಯಡಿಯೂರು ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ದೇವಾಲಯಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಉಪಸಭಾಪತಿ ಹಾಗೂ ಹಿರಿಯ ಕಲಾವಿದೆ ಡಾ: ಉಮಾಶ್ರೀ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಉಪ ಸಭಾಪತಿಯವರನ್ನು ಮಂಗಳವಾದ್ಯಗಳೊಂದಿಗೆ ದೇಗುಲಕ್ಕೆ ಬರಮಾಡಿಕೊಳ್ಳಲಾಯಿತು. ನಂತರ ಉಮಾಶ್ರೀ ಅವರು, ಶ್ರೀ ತೋಂಟದ ಸಿದ್ಧಲಿಂಗರವರ ನಿರ್ವಿಕಲ್ಪ ಶಿವಯೋಗ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು. ದೇವರ ದರ್ಶನ ಪಡೆದು, ನಾಡಿಗೆ ಉತ್ತಮ ಮಳೆ ಬೆಳೆಯಾಗಲಿ; ನಾಡಿನ ಸರ್ವರಿಗೂ ಒಳಿತಾಗಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸಿದರು.

ಬಳಿಕ ದೇವಾಲಯದ ವ್ಯವಸ್ಥಾಪನಾ ಮಂಡಳಿಯಿಂದ ಉಪಸಭಾಪತಿ ಡಾ: ಉಮಾಶ್ರೀ ಅವರನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಪುಣ್ಯ ಕ್ಷೇತ್ರಕ್ಕೆ ಆಗಮಿಸಿದ್ದ ಸಹಭಕ್ತರೊಂದಿಗೆ ಬೆರೆತು ಯೋಗಕ್ಷೇಮ ವಿಚಾರಿಸಿದರು. ಈ ವೇಳೆ ಉಪ ಸಭಾಪತಿಯವರ ಹಿರಿಯ ಆಪ್ತ ಸಹಾಯಕ ರಾಮಮೂರ್ತಿ,

ಇನ್ನಿತರರು ಉಪಸ್ಥಿತರಿದ್ದರು.

ನಂತರ, ಯಡಿಯೂರು ಶ್ರೀಕ್ಷೇತ್ರದ ಪ್ರಸಾದ ಮಂದಿರಕ್ಕೆ ತೆರಳಿದ ಉಪಸಭಾಪತಿ ಡಾ: ಉಮಾಶ್ರೀ ಅವರು, ಪ್ರಸಾದ ಮಂದಿರದ ಮಹಿಳೆಯರೊಂದಿಗೆ ಸೇರಿ ಹೋಳಿಗೆ ಮಾಡಿದರು. ತದನಂತರ, ಭೋಜನಾಲಯದಲ್ಲಿ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ, ದಾಸೋಹಕ್ಕೆ ಚಾಲನೆ ನೀಡಿದರು. ಅಲ್ಲದೆ, ಸಹಭಕ್ತರಿಗೆ ಭೋಜನ ಬಡಿಸಿದರು. ತಾವು ಕೂಡ ಸಹಪಂಕ್ತಿಯಲ್ಲಿ ಕುಳಿತು ಪ್ರಸಾದ ಸವಿದು ಸಂತಸಪಟ್ಟರು.

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡಾ, ತಿಪಟೂರು ಶಾಖೆ,
ಕೆ ಬಿ ಶಿವಪ್ಪ ಕಾಂಪ್ಲೆಕ್ಸ್, ನಂ.589, ಬಿ.ಎಚ್ ರಸ್ತೆ, ತಿಪಟೂರು, ತುಮಕೂರು ಜಿಲ್ಲೆ– 572201
ಇಮೇಲ್ ಐಡಿ: TIPTUR@bankofbaroda.bank.in

ಆಸ್ತಿಗಳ ಮಾರಾಟದ ಸೂಚನೆ
ಅನುಬಂಧ–IV-A [ನಿಯಮ 6 (2) ಮತ್ತು 8 (6) ರ ನಿಬಂಧನೆಯನು ನೋಡಿ]

ಇ–ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್ ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್ ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, " ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಶಾಖೆ/ ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಇ ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ ಸಂ	ಸಾಲಗಾರ/ರು/ಖಾತರಿದಾರರು/ರು/ ಮಾಲೀಕರು(ರು) ಹೆಸರು ಮತ್ತು ವಿಳಾಸ	ತಿಳಿದಿರುವ ಋಣಭಾರಗಳನ್ನು ಹೊಂದಿರುವ ಸ್ಥಿರ/ಚರ ಆಸ್ತಿಯ ವಿವರವಾದ ವಿವರಣೆ, ಯಾವುದಾದರೂ ಇದ್ದರೆ (ಮಾಲೀಕರು/ಅಡಮಾನದಾರರ ಹೆಸರು: ಶ್ರೀಮತಿ. ಜ್ಯೋತಿ ಲಕ್ಷ್ಮಿ ಕೋಂ ಎಚ್ ಎನ್ ನಾಗರಾಜು)	ಒಟ್ಟು ಖರ್ಚುಗಳು	ಇ–ಹರಾಜಿನ ದಿನಾಂಕ ಮತ್ತು ಸಮಯ	ಮೀಸಲು ಬೆಲೆ, ಇಎಂಡಿ, ಇಎಂಡಿ ಮೊತ್ತದ ಕೊನೆಯ ದಿನಾಂಕ ಮತ್ತು ಬಿಡ್ ಹೆಚ್ಚಳ ಮೊತ್ತ	ಸ್ವಾಧೀನದ ಸ್ಥಿತಿ	ಆಸ್ತಿ ತಪಾಸಣೆ ದಿನಾಂಕ ಮತ್ತು ಸಮಯ
01 02 03	ಮೆ॥ ಕೆಂಚರಾಯ ಹ್ಯಾಂಡ್‌ಲೂಮ್ ಪ್ರೋ॥ ಶ್ರೀಮತಿ. ಜ್ಯೋತಿ ಲಕ್ಷ್ಮಿ ಶ್ರೀಮತಿ. ಜ್ಯೋತಿ ಲಕ್ಷ್ಮಿ ಕೋಂ ಎಚ್ ಎನ್ ನಾಗರಾಜು, #19/67, ಕೆಂಚರಾಯಸ್ವಾಮಿ ದೇವಸ್ಥಾನದ ಹತ್ತಿರ, ಹಳೇಪಾಳ್ಯ ಅಂಚೆ, ತಿಪಟೂರು– 572201. ಶ್ರೀ ನಟರಾಜು ಹೆಚ್.ಎನ್ ಬಿನ್ ಹೆಚ್.ವಿ ನಾಗರಾಜು, #19/67, ಕೆಂಚರಾಯಸ್ವಾಮಿ ದೇವಸ್ಥಾನದ ಹತ್ತಿರ, ಹಳೇಪಾಳ್ಯ ಅಂಚೆ, ತಿಪಟೂರು– 572201. ಶ್ರೀ ಚೇತನ್ ಕೆ ಎನ್ ಬಿನ್ ನಟರಾಜು ಎಚ್ ಎನ್ #19/67, ಕೆಂಚರಾಯ ಸ್ವಾಮಿ ದೇವಸ್ಥಾನದ ಹತ್ತಿರ, ಹಳೇಪಾಳ್ಯ ಅಂಚೆ, ತಿಪಟೂರು– 572201.	ಆಸ್ತಿ ವೇಳಾಪಟ್ಟಿ: ತಿಪಟೂರು ತಾಲ್ಲೂಕು–572201 ರ ಕಸಬಾ ಹೋಬಳಿ, ಹಳೇಪಾಳ್ಯ ಗ್ರಾಮದಲ್ಲಿ ನೆಲೆಗೊಂಡಲ್ಲಿ ಇ ಖಾತೆ ಸಂಖ್ಯೆ: 152500800701620742, ಆಸ್ತಿ ಸಂಖ್ಯೆ: 274/67, ಸೈಟ್ ಸಂಖ್ಯೆ: 67 ಆಸ್ತಿಯ ಎಲ್ಲಾ ಭಾಗಗಳು. ವೇಳಾಪಟ್ಟಿ ಆಸ್ತಿಯ ಗಡಿ ರೇಖೆಗಳನ್ನು ಹೊಂದಿದೆ: ಪೂರ್ವ: ಸೈಟ್ ಸಂಖ್ಯೆ. 66, ಪಶ್ಚಿಮ: ರಸ್ತೆ, ಉತ್ತರ: ರಸ್ತೆ, ದಕ್ಷಿಣ: ಸೈಟ್ ಸಂಖ್ಯೆ. 68.	ರೂ.6,47,578/-(ಆರು ಲಕ್ಷದ ನಲವತ್ತ ಏಳು ಸಾವಿರದ ಐದು ನೂರ ಎಪ್ಪತ್ತ ಎಂಟು ರೂಪಾಯಿಗಳು ಮಾತ್ರ) (09.04.2024 ರವರೆಗೆ + ಬಡ್ಡಿ ಮತ್ತು ಶುಲ್ಕಗಳು + 10-04-2024 ರಿಂದ ಅನ್ವಯವಾಗುವ ಒಪ್ಪಂದದ ದರದಲ್ಲಿ ಹೆಚ್ಚುವರಿ ಬಡ್ಡಿ + ಪಾವತಿ ದಿನಾಂಕದವರೆಗಿನ ವೆಚ್ಚ ಗಳು, ಶುಲ್ಕಗಳು ಮತ್ತು ವೆಚ್ಚಗಳು)	28-10-2026 ರಂದು ಮಧ್ಯಾಹ್ನ 2:00 ರಿಂದ ಸಂಜೆ 6:00 ರವರೆಗೆ	ಮೀಸಲು ಬೆಲೆ: ರೂ. 10,20,000/– ಇಎಂಡಿ: ರೂ. 1,02,000/– ಇಎಂಡಿ ಮೊತ್ತವನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 28-10-2026 ಸಂಜೆ 2:00 ಗಂಟೆಯೊಳಗೆ ಬಿಡ್ ಹೆಚ್ಚಳ ಮೊತ್ತ: ರೂ. 10,000.00/–	ಭೌತಿಕ ಸ್ವಾಧೀನ	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ ಯೊಂದಿಗೆ

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು https://www.bankofbaroda.in/e-auction ವೆಬ್‌ಸೈಟ್ ಲಿಂಕ್ ಮತ್ತು ಆನ್‌ಲೈನ್ ಹರಾಜು ಪೋರ್ಟಲ್ https://Baanknet.com ಅನ್ನು ನೋಡಿ/ಭೇಟಿ ನೀಡಿ. ಆಸ್ತಿ ತೆರಿಗೆ, ಇ–ಖಾತಾ ಶುಲ್ಕಗಳು, ಸೊಸೈಟಿಯ ನಿರ್ವಹಣಾ ಶುಲ್ಕಗಳು, ವಿದ್ಯುತ್ ಶುಲ್ಕಗಳು ಮತ್ತು ಅತಿ ಹೆಚ್ಚು ಬಿಡ್ದಾರರು ವಿಧಿಸಬೇಕಾದ ಯಾವುದೇ ಇತರ ಕಾನೂನು ಶುಲ್ಕಗಳಿಗೆ ಸಂಬಂಧಿಸಿದ ಬಾಕಿ ಶುಲ್ಕಗಳು. "ಅಲ್ಲದೆ, ಸಂಭಾವ್ಯ ಬಿಡ್ದಾರರು ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಬಹುದು ವಿಚಾರಣೆಗಳಿಗಾಗಿ ಮೊಬೈಲ್: 9908821836 ಮತ್ತು ಇಮೇಲ್ ಐಡಿ: support.BAANKNET@psballiance.com

ದಿನಾಂಕ: 05-10-2026
ಸ್ಥಳ: ಬೆಂಗಳೂರು

ಶ್ರೀ ಎಂ ವಿದ್ಯಾಸಾಗರ್
ಮುಖ್ಯ ವ್ಯವಸ್ಥಾಪಕರು (ಅಧಿಕೃತ ಅಧಿಕಾರಿ)
ಉಪ ಪ್ರಾದೇಶಿಕ ವ್ಯವಸ್ಥಾಪಕರು
ಬೆಂಗಳೂರು ಗ್ರಾಮೀಣ

ಸಾರ್ವಜನಿಕ ಪ್ರಕಟಣೆ

ಶಾಂತ ರಾಜು ಬಿನ್ ಲೇಟ್ ಬೋರೇಗೌಡ ನಂ.7, 6ನೇ ಕ್ರಾಸು, ಪೂಜಾ ಗಾರ್ಡನ, ಕೆ. ಚನ್ನಸಂದ್ರ ಬೆಂಗಳೂರು-560043 ಇದೇ ತುಮಕರಾರು ಜಿಲ್ಲೆ, ತುರುವೇಕೆರೆ ತಾಲೂಕು : # 21 ದಬ್ಬೆಘಟ್ಟ ಹೋಬಳಿ ಕಡೆಹಳಿಕಾವಲು ಗ್ರಾಮದ ಸರ್ವೆ ನಂ.40ರ ಪೈಕಿ, 40/1 ರಲ್ಲಿ ವಿಸ್ತೀರ್ಣ 2 ಎಕರೆ ರುದ್ರಮ್ಮ ಕೋಂ ಅಂಕಣ್ಣ ಮತ್ತು ಸರ್ವೆ ನಂ. 40/2, ಬೋರೇಗೌಡ ಬಿನ್ ಲಕ್ಕಣ್ಣೆ ಗೌಡ 1 ಎಕರೆ ವಿಸ್ತೀರ್ಣ ಈ ಆಸ್ತಿಯು ಮಾರಾಟಕಿದ್ದು, ಇದರ ಸಂಬಂಧವಾಗಿ ಯಾವುದೇ ತಂಟೆ ತಕರಾರುಗಳು ಬಂದಲ್ಲಿ 7 ದಿನಗಳೊಳಗಾಗಿ ಅಕ್ಷೇಪಣೆ ಸಲ್ಲಿಸಬಹುದು ಎಂಬುದಾಗಿ ಈ ಮೂಲಕ ಪ್ರಮಾಣ ಮಾಡಿರುತ್ತೇನೆ ಮೇಲಿನ ಎಲ್ಲಾ ಅಂಶಗಳು ಸವಾದಿಸಿದಂತೆ ಸರಿಂಯಾಗಿದೆ: ಸತ್ಯವಾಗಿದೆ ನಿಜವಾಗಿದೆ ಇದಕ್ಕೆ ನಾನು ಸಹಿ ಮಾಡಿ ನೋಟರಿ ಸಮಕದಲ್ಲಿ ಈ ಪ್ರಮಾಣ ಪತ್ರವನ್ನು ದುಢೀಕರಿಸಿಡಿತ್ತೇವೆ. ವಕೀಲರು ಮತ್ತು ನೋಟರಿ ಲಕ್ಷ್ಮಯ್ಯ, ಬೆಂಗಳೂರು.

ಕನ್ನಡಪ್ರಭ ಮಂಗಳವಾರ
ವಿತ್ತಪ್ರಭ
ಅರ್ಥ ಜಗತ್ತಿನ ಆಪ್ತಮಿತ್ರ

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡ
ಉಜ್ಜನಿ ಶಾಖೆ: ಹುಲಿಯೂರುದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು -572123.
E-Mail Id:vjujni@bankofbaroda.bank.in

ಸ್ವಾಧೀನ ಸೂಚನೆ (ಸ್ಥಿರ ಆಸ್ತಿ) [ನಿಯಮ-8(1)]

ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 (ಕಾಯಿದೆ 2002ರ 54ರ) (ಇನ್ನು ಮುಂದಕ್ಕೆ "ಕಾಯಿದೆ" ಎಂದು ಕರೆಯಲಾಗುವುದು) ಅಡಿಯಲ್ಲಿ ನೇಮಕಗೊಂಡ ಕೆಳಗೆ ಸಹಿ ಮಾಡಿರುವ ಬ್ಯಾಂಕ್ ಆಫ್ ಬರೋಡ, ಉಜ್ಜನಿ ಶಾಖೆ ನಿಯೋಜಿತ ಅಧಿಕಾರಿ, ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮಗಳು 2002 ಪರಿಚ್ಛೇದ 13(12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಉಪಯೋಗಿಸಿಕೊಂಡು ದಿನಾಂಕ 21-07-2026 ಡಿಮ್ಯಾಂಡ್ ನೋಟೀಸನ್ನು ಸಾಲಗಾರರು : 1. ಶ್ರೀ ಮೆ॥ ದರ್ಶಿತ್ ರೆಸ್ಟೋರೆಂಟ್ ಮತ್ತು ಲಾಡ್ಜ್ ಪ್ರತಿನಿಧಿಸುವ ಅದರ ಮಾಲೀಕರಾದ ಶ್ರೀ ಹೆಚ್ ಟಿ ಹೊನಪ್ಪ ಬಿನ್ ತಿರುಮಲಯ್ಯ, ನಂ.143, ಖಾತಾ ನಂ 177, ಕೊಡವಟ್ಟಿ ರಸ್ತೆ, ಶ್ರೀನಗರ ಸಾಗರ, ಹುಲಿಯೂರುದುರ್ಗ, ಕುಣಿಗಲ್ ತಾಲ್ಲೂಕು, ತುಮಕೂರು-572123. 2. ಶ್ರೀ ಎಚ್ ಟಿ ಹೊನಪ್ಪ ಬಿನ್ ತಿರುಮಲಯ್ಯ, ಹುಲಿಯೂರುದುರ್ಗ ಹೋಬಳಿ, ಕುಣಿಗಲ್ ತಾಲೂಕು, ಹಿತ್ತಲಾಪುರ, ಉಜ್ಜನಿ, ತುಮಕೂರು, ಕರ್ನಾಟಕ-572123 ರವರಿಗೆ ಸದರಿ ಬಾಕಿ ಸಾಲದ ಬಾಬ್ತು ರೂ. 99,99,140.23/- (ರೂಪಾಯಿ ತೊಂಬತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತು ಸಾವಿರದ ನೂರ ನಲವತ್ತು ಮತ್ತು ಇಪ್ಪತ್ತಮೂರು ಪೈಸೆ ಮಾತ್ರ) (16-06-2026 ರಂತೆ) + 17-06-2026 ರಿಂದ ಬಡ್ಡಿ + ಸೂಚನೆ ದಿನಾಂಕದಿಂದ 60 ದಿನಗಳಲ್ಲಿ ಪಾವತಿ ದಿನಾಂಕದವರೆಗೆ ಒಪ್ಪಂದದ ಪ್ರಕಾರ ಎಲ್ಲಾ ಇತರ ಶುಲ್ಕಗಳು ಮತ್ತು ವೆಚ್ಚಗಳು.
ಸಾಲಗಾರರು/ಅಡಮಾನದಾರರು/ಜಾಮೀನುದಾರರು ಬಾಕಿ ಹಣವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ ನಿಯೋಜಿತ ಅಧಿಕಾರಿಯವರು ಮೇಲೆ ಹೇಳಿದ ಕಾಯಿದೆಯ ಪರಿಚ್ಛೇದ 13(4) ರ ಮತ್ತು ನಿಯಮ 8 ರಲ್ಲಿ ದತ್ತವಾದ ಅಧಿಕಾರದಂತೆ ಅವನ/ ಅವಳ ಕೆಳಗೆ ವಿವರಣೆ ನೀಡಿದ ಆಸ್ತಿಯನ್ನು 03 ಅಕ್ಟೋಬರ್ 2026 ರಂದು ಸ್ವಾಧೀನಪಡಿಸಲಾಗಿದೆ ಎಂದು ಸಾಲಗಾರರಿಗೆ, ಜಾಮೀನುದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.
ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಸ್ಥಿರಾಸ್ತಿಯ ಬಗ್ಗೆ ಯಾವುದೇ ವ್ಯವಹಾರ ಮಾಡಬಾರದಾಗಿ ಈ ಮೂಲಕ ಎಚ್ಚರಿಸಲಾಗಿದೆ. ಆದಾಗ್ಯೂ ಈ ಸ್ಥಿರಾಸ್ತಿ ಬಗ್ಗೆ ವ್ಯವಹಾರ ನಡೆಸಿದಲ್ಲಿ ಬ್ಯಾಂಕ್ ಆಫ್ ಬರೋಡ, ಉಜ್ಜನಿ ಶಾಖೆಗೆ ಸಲ್ಲತಕ್ಕ ಪ್ರಸ್ತುತ ಬಾಕಿ ಬಾಬ್ತು ರೂ. 99,99,140.23/- (ರೂಪಾಯಿ ತೊಂಬತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತು ಸಾವಿರದ ನೂರ ನಲವತ್ತು ಮತ್ತು ಇಪ್ಪತ್ತಮೂರು ಪೈಸೆ ಮಾತ್ರ) (16-06-2026 ರವರೆಗೆ) + 17-06-2026 ರಿಂದ ಬಡ್ಡಿ + ಒಪ್ಪಂದದ ಪ್ರಕಾರ ಎಲ್ಲಾ ಇತರ ಶುಲ್ಕಗಳು ಮತ್ತು ಪಾವತಿ ದಿನಾಂಕದವರೆಗಿನ ವೆಚ್ಚಗಳು.
ರಿಂದ ಅದರ ಬಡ್ಡಿ ಮತ್ತು ಇತರ ವೆಚ್ಚಗಳು.
ಭದ್ರತಾ ಆಸ್ತಿಯನ್ನು ಬಿಡಿಸಿಕೊಳ್ಳಲು ಇರುವ ಕಾಲಮಿತಿಯನ್ನು ಕಾಯ್ದೆಯ ಪ್ರಕರಣ 13(8) ಅನ್ವಯ ಸಾಲ ಪಡಕೊಂಡವರ ಗಮನಕ್ಕೆ ತರಲಾಗಿದೆ.

ಭದ್ರತಾ ಆಸ್ತಿಯ ವಿವರಣೆ:
ತುಮಕೂರು ಜಿಲ್ಲೆ -572123, ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಹೋಬಳಿ, ಶೃಂಗಾರಸಾಗರ ಗ್ರಾಮದಲ್ಲಿರುವ 3325 ಚದರ ಅಡಿ ವಿಸ್ತೀರ್ಣದ ಸಂಪೂರ್ಣ ಭಾಗವನ್ನು ಹೊಂದಿರುವ ಆಸ್ತಿ ಸಂಖ್ಯೆ 143/177 ಇ-ಖಾತಾ ಸಂಖ್ಯೆ 152500402100100233. ಇದರ ಗಡಿಗಳು: ಪೂರ್ವ: ಜವರಪ್ಪನ ಉಳಿಕೆ ಆಸ್ತಿ, ಪಶ್ಚಿಮ: ಕೊಡವತಿ ರಸ್ತೆ, ಉತ್ತರ: ಮಾದಪ್ಪನ ಆಸ್ತಿ, ದಕ್ಷಿಣ: 03 ಅಡಿ ಗಲ್ಲಿ ಮತ್ತು ದೊಡ್ಡಯ್ಯನ ಆಸ್ತಿ.

ದಿನಾಂಕ : 03-10-2026
ಸ್ಥಳ : ಉಜ್ಜನಿ
ಸಹಿ/-
ಮುಖ್ಯ ವ್ಯವಸ್ಥಾಪಕ/ಅಧಿಕೃತ ಅಧಿಕಾರಿ

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಾದೇಶಿಕ ಕಛೇರಿ, ತುಮಕೂರು
ಮಾರುತಿ ಟವರ್ಸ್, 3ನೇ ಮಹಡಿ, ಎಸ್‌ಐಟಿ ಮುಖ್ಯ ಗೇಟ್ ಹತ್ತಿರ, ಬಿಹೆಚ್ ರಸ್ತೆ, ವಾರ್ಡ್ ನಂ.27, ಗಂಗೋತ್ರಿನಗರ, ತುಮಕೂರು. ಇ-ಮೇಲ್: rectumkurro@canarabank.com

ಸ್ವಾಧೀನ ಸೂಚನೆ [ನಿಯಮ 8(1) (ಸ್ಥಿರಾಸ್ತಿ)]

ಕೆಳಸಹಿದಾರರು, ಕೆನರಾ ಬ್ಯಾಂಕ್, ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ (ಆಕ್ಟ್ 54ರ 2002) ಅನ್ವಯ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 3ನ್ನು ಓದಿಕೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು ಮತ್ತು ಬಡ್ಡಿಯನ್ನು ಮರುಪಾವತಿಮಾಡಲು ಕೆಳಗೆ ಸೂಚಿಸಿರುವ ಸಾಲಗಾರರಿಗೆ/ ಜಾಮೀನುದಾರರಿಗೆ / ಅಡಮಾನದಾರರಿಗೆ ಕೆಳಗೆ ತಿಳಿಸಿದ ದಿನಾಂಕ ದಂದು ನೀಡಿದ ಡಿಮ್ಯಾಂಡ್ ನೋಟೀಸಿನಲ್ಲಿ ಸೂಚಿಸಲಾಗಿತ್ತು.
ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ಸದರಿ ಮೊಬಲಗನ್ನು ಮರು ಪಾವತಿಸದೇ ಇರುವುದರಿಂದ ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ಹಾಗೂ ಸಾರ್ವಜನಿಕರಿಗೆ ಕೆಳಗೆ ವಿವರಿಸಲಾದ ಆಸ್ತಿಗಳನ್ನು ಈ ಮೇಲೆ ತಿಳಿಸಿದ ಸೆಕ್ಯೂರಿಟಿ ಇಂಟರೆಸ್ಟ್ ಕಾಯಿದೆಯ ಕಲಂ 13(4)ರ ನಿಯಮ 8 ಮತ್ತು 9 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೆಳಸಹಿದಾರರು ಬ್ಯಾಂಕಿಗೆ ಅಡಮಾನ ಮಾಡಿರುವ ಆಸ್ತಿಯನ್ನು ಕೆಳಕಂಡ ದಿನಾಂಕದಂದು ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ಈ ಮೂಲಕ ತಿಳಿಯಪಡಿಸಿದೆ.
ಸಾಲಗಾರರು / ಜಾಮೀನುದಾರರು / ಅಡಮಾನದಾರರು ಸಾರ್ವಜನಿಕರು ಹಾಗೂ ನಿರ್ದಿಷ್ಟವಾಗಿ ಸಾಲಗಾರರು ಈ ಕೆಳಗೆ ವಿವರಿಸಿದ ಆಸ್ತಿಗಳೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ನಡೆಸಿದ್ದೇ ಆದರೆ ಕೆನರಾ ಬ್ಯಾಂಕ್, ಇವರಿಗೆ ಸಂದಾಯವಾಗತಕ್ಕ ಮೊಬಲಗು ಹಾಗೂ ಅದರ ಮೇಲಿನ ಬಡ್ಡಿ ಹಾಗೂ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.
ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8) ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು.

1. ಸಾಲಗಾರರ ಹೆಸರು ಮತ್ತು ವಿಳಾಸ: (1) ಶ್ರೀಮತಿ ಅನಿತಾ ಜೈಕುಮಾರ್ ಕೋಂ ಹರೀಶ್ ಸಿ ಆರ್, (2) ಶ್ರೀ ಹರೀಶ್ ಸಿ ಆರ್ ಬಿನ್ ರಾಜಣ್ಣ ಸಿ ಜೆ, ಇವರಿಬ್ಬರ ವಿಳಾಸ : ಸಿದ್ದೇಶ್ವರ ನಿಲಯ, 6ನೇ ಕ್ರಾಸ್, ವಿದ್ಯಾನಗರ, ತುಮಕೂರು-572103.
ನೋಟಿಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ ರೂ. 1,01,53,408/- (ರೂಪಾಯಿ ಒಂದು ಕೋಟಿ ಒಂದು ಲಕ್ಷದ ಐವತ್ತಮೂರು ಸಾವಿರದ ನಾಲ್ಕುನೂರ ಎಂಟು) ಜೊತೆಗೆ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳನ್ನು ಪಾವತಿಸಬೇಕಾಗುವುದು.
ಡಿಮ್ಯಾಂಡ್ ನೋಟಿಸ್ ದಿನಾಂಕ: 30.07.2026 ಸ್ವಾಧೀನ ತೆಗೆದುಕೊಂಡ ದಿನಾಂಕ : 01.10.2026
ಸ್ಥಿರಾಸ್ತಿಯ ವಿವರ
ಶೀರ್ಷಿಕೆದಾರರ ಹೆಸರು : ಶ್ರೀ ಹರೀಶ್ ಸಿ. ಆರ್. ಮತ್ತು ಶ್ರೀಮತಿ ಅನಿತಾ ಜೆ.
ಸ್ಥಿರಾಸ್ತಿ :(1) ಎಲ್ಲಾ ಭಾಗ ಮತ್ತು ವಿಭಾಗಳನ್ನೊಳಗೊಂಡಿರುವ ನಿವೇಶನದ ಆಸ್ತಿಯ ನಂ. 25 (ಸರ್ವೆ ನಂ. 53/1, 53/2, 53/3, 53/4, 53/5, 53/6 ಮತ್ತು 53/7 ದೇವರಾಯಪಟ್ಟಣ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನಲ್ಲಿ ರೂಪಿಸಲಾಗಿದ್ದು, ವಾರ್ಡ್ ನಂ.35 ರ ಮುನಿಸಿಪಲ್ ಖಾತಾ ನಂ.6506, ಈ ಆಸ್ತಿಯು ಉತ್ತರ ರೈಲ್ವೆ ಮಾರ್ಗ ಮತ್ತು ಬಿ.ಹೆಚ್. ರಸ್ತೆ ಎಕ್ಸ್‌ಟೆನ್ಷನ್, ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿ, ದೇವರಾಯಪಟ್ಟಣದಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 12.2 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.14 ಮೀಟರ್‌ಗಳು. ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.34, ಉತ್ತರಕ್ಕೆ : ನಿವೇಶನ ನಂ.26, ದಕ್ಷಿಣಕ್ಕೆ: ರಸ್ತೆ
(2) ಎಲ್ಲಾ ಭಾಗ ಮತ್ತು ವಿಭಾಗಳನ್ನೊಳಗೊಂಡಿರುವ ನಿವೇಶನದ ಆಸ್ತಿಯ ನಂ.26 (ಸರ್ವೆ ನಂ. 53/1, 53/2, 53/3, 53/4, 53/5, 53/6 ಮತ್ತು 53/7 ದೇವರಾಯಪಟ್ಟಣ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನಲ್ಲಿ ರೂಪಿಸಲಾಗಿದೆ. ವಾರ್ಡ್ ನಂ.35 ರ ಮುನಿಸಿಪಲ್ ಖಾತಾ ನಂ.6335, ಈ ಆಸ್ತಿಯು ಉತ್ತರ ರೈಲ್ವೆ ಮಾರ್ಗ ಮತ್ತು ಬಿ.ಹೆಚ್.ರಸ್ತೆ ಎಕ್ಸ್‌ಟೆನ್ಷನ್, ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿ, ದೇವರಾಯಪಟ್ಟಣದಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 12.2 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.14 ಮೀಟರ್‌ಗಳು. ಪೂರ್ವಕ್ಕೆ: 9 ಮೀಟರ್ ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.33, ಉತ್ತರಕ್ಕೆ : ನಿವೇಶನ ನಂ.27, ದಕ್ಷಿಣಕ್ಕೆ: ನಿವೇಶನ ನಂ.25.
(3) ಎಲ್ಲಾ ಭಾಗ ಮತ್ತು ವಿಭಾಗಳನ್ನೊಳಗೊಂಡಿರುವ ನಿವೇಶನದ ಆಸ್ತಿಯ ನಂ. 27 (ಸರ್ವೆ ನಂ. 53/1, 53/2, 53/3, 53/4, 53/5, 53/6 ಚಿಟಿಜ 53/7 ದೇವರಾಯಪಟ್ಟಣ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನಲ್ಲಿ ರೂಪಿಸಲಾಗಿದೆ. ವಾರ್ಡ್ ನಂ.35 ರ ಮುನಿಸಿಪಲ್ ಖಾತಾ ನಂ.6336, ಈ ಆಸ್ತಿಯು ಉತ್ತರ ರೈಲ್ವೆ ಮಾರ್ಗ ಮತ್ತು ಬಿ.ಹೆಚ್.ರಸ್ತೆ ಎಕ್ಸ್‌ಟೆನ್ಷನ್, ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿ, ದೇವರಾಯಪಟ್ಟಣದಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 12.2 ಮೀಟರ್, ಉತ್ತರದಿಂದ ದಕ್ಷಿಣಕ್ಕೆ : 9.14 ಮೀಟರ್. ಪೂರ್ವಕ್ಕೆ: 9 ಮೀಟರ್ ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.32, ಉತ್ತರಕ್ಕೆ : ನಿವೇಶನ ನಂ.28, ದಕ್ಷಿಣಕ್ಕೆ: ನಿವೇಶನ ನಂ.26.
(4) ಎಲ್ಲಾ ಭಾಗ ಮತ್ತು ವಿಭಾಗಳನ್ನೊಳಗೊಂಡಿರುವ ನಿವೇಶನದ ಆಸ್ತಿಯ ನಂ. 32 (ಸರ್ವೆ ನಂ. 53/1, 53/2, 53/3, 53/4, 53/5, 53/6 ಮತ್ತು 53/7 ದೇವರಾಯಪಟ್ಟಣ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನಲ್ಲಿ ರೂಪಿಸಲಾಗಿದೆ. ವಾರ್ಡ್ ನಂ.35 ರ ಮುನಿಸಿಪಲ್ ಖಾತಾ ನಂ.6339, ಈ ಆಸ್ತಿಯು ಉತ್ತರ ರೈಲ್ವೆ ಮಾರ್ಗ ಮತ್ತು ಬಿ.ಹೆಚ್.ರಸ್ತೆ ಎಕ್ಸ್‌ಟೆನ್ಷನ್, ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿ, ದೇವರಾಯಪಟ್ಟಣದಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 15.24 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.14 ಮೀಟರ್‌ಗಳು. ಪೂರ್ವಕ್ಕೆ: ನಿವೇಶನ ನಂ.27, ಪಶ್ಚಿಮಕ್ಕೆ: 9 ಮೀಟರ್ ರಸ್ತೆ, ಉತ್ತರಕ್ಕೆ : ನಿವೇಶನ ನಂ.31, ದಕ್ಷಿಣಕ್ಕೆ: ನಿವೇಶನ ನಂ.33.
(5) ಎಲ್ಲಾ ಭಾಗ ಮತ್ತು ವಿಭಾಗಳನ್ನೊಳಗೊಂಡಿರುವ ನಿವೇಶನದ ಆಸ್ತಿಯ ನಂ. 33 (ಸರ್ವೆ ನಂ. 53/1, 53/2, 53/3, 53/4, 53/5, 53/6 ಮತ್ತು 53/7 ದೇವರಾಯಪಟ್ಟಣ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನಲ್ಲಿ ರೂಪಿಸಲಾಗಿದೆ. ವಾರ್ಡ್ ನಂ.35 ರ ಮುನಿಸಿಪಲ್ ಖಾತಾ ನಂ.6340, ಈ ಆಸ್ತಿಯು ಉತ್ತರ ರೈಲ್ವೆ ಮಾರ್ಗ ಮತ್ತು ಬಿ.ಹೆಚ್.ರಸ್ತೆ ಎಕ್ಸ್‌ಟೆನ್ಷನ್, ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿ, ದೇವರಾಯಪಟ್ಟಣದಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 15.24 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.14 ಮೀಟರ್‌ಗಳು. ಪೂರ್ವಕ್ಕೆ: ನಿವೇಶನ ನಂ.26, ಪಶ್ಚಿಮಕ್ಕೆ: 9 ಮೀಟರ್ ರಸ್ತೆ, ಉತ್ತರಕ್ಕೆ : ನಿವೇಶನ ನಂ.32, ದಕ್ಷಿಣಕ್ಕೆ: ನಿವೇಶನ ನಂ.34.
(6) ಎಲ್ಲಾ ಭಾಗ ಮತ್ತು ವಿಭಾಗಳನ್ನೊಳಗೊಂಡಿರುವ ನಿವೇಶನದ ಆಸ್ತಿಯ ನಂ.34 (ಸರ್ವೆ ನಂ. 53/1, 53/2, 53/3, 53/4, 53/5, 53/6 ಮತ್ತು 53/7 ದೇವರಾಯಪಟ್ಟಣ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನಲ್ಲಿ ರೂಪಿಸಲಾಗಿದೆ. ವಾರ್ಡ್ ನಂ.35 ರ ಮುನಿಸಿಪಲ್ ಖಾತಾ ನಂ.6512, ಈ ಆಸ್ತಿಯು ಉತ್ತರ ರೈಲ್ವೆ ಮಾರ್ಗ ಮತ್ತು ಬಿ.ಹೆಚ್.ರಸ್ತೆ ಎಕ್ಸ್‌ಟೆನ್ಷನ್, ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿ, ದೇವರಾಯಪಟ್ಟಣದಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ ; 15.24 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.14 ಮೀಟರ್‌ಗಳು. ಪೂರ್ವಕ್ಕೆ: ನಿವೇಶನ ನಂ.25, ಪಶ್ಚಿಮಕ್ಕೆ: 9 ಮೀಟರ್ ರಸ್ತೆ, ಉತ್ತರಕ್ಕೆ : ನಿವೇಶನ ನಂ.33, ದಕ್ಷಿಣಕ್ಕೆ: ರಸ್ತೆ.
CERSAI ID: 400035756510

2. ಸಾಲಗಾರರ/ಸಹ-ಸಾಲಗಾರರ/ಜಾಮೀನುದಾರರ/ಅಡಮಾನುದಾರರ ಹೆಸರು ಮತ್ತು ವಿಳಾಸ: (1) ಶ್ರೀ ಹರೀಶ್ ಸಿ ಆರ್ (ಸಾಲಗಾರರು) ಬಿನ್ ರಾಜಣ್ಣ ಸಿ ಜೆ, (2) ಶ್ರೀಮತಿ ಅನಿತಾ ಜೈಕುಮಾರ್ (ಜಂಟಿ ಸಾಲಗಾರರು) ಕೋಂ ಹರೀಶ್ ಸಿ ಆರ್, ಇವರಿಬ್ಬರ ವಿಳಾಸ : ಸಿದ್ದೇಶ್ವರ ನಿಲಯ, 6ನೇ ಕ್ರಾಸ್, ವಿದ್ಯಾನಗರ, ತುಮಕೂರು-572103. (3) ಶ್ರೀಮತಿ ಪಿ. ಜಯಮ್ಮ (ಜಾಮೀನುದಾರರು) ಕೋಂ ಜೈಕುಮಾರ್, ಎಸ್ ಎಲ್ ಪುಣ್ಯ ಶ್ರವಣ ಹೊಸ ಎಕ್ಸ್‌ಟೆನ್ಷನ್, ಪ್ರಶಾಂತ್ ನಗರ, ದೇವರಪಟ್ಟಣ, ತುಮಕೂರು-572101. (4) ಸಿ ಜೆ ರಾಜಣ್ಣ (ಜಾಮೀನುದಾರರು), ಸಿದ್ದೇಶ್ವರ ನಿಲಯ, 6ನೇ ಅಡ್ಡರಸ್ತೆ, ವಿದ್ಯಾನಗರ, ತುಮಕೂರು-572101. (5) ಜಿ ಸಿ ವಿಪಿನ್ ಚಂದ್ರ (ಜಾಮೀನುದಾರರು) ಬಿನ್ ಚಂದ್ರಶೇಖರಯ್ಯ ಜಿ ಹೆಚ್, ಸಂಚಿತ, 9ನೇ ಮುಖ್ಯ ರಸ್ತೆ, ಮಹಾಲಕ್ಷ್ಮಿ ನಗರ, ಎಪಿಎಂಸಿ ಎದುರು, ತುಮಕೂರು-572101.
ನೋಟಿಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ ರೂ. 8,95,30,337/- (ರೂಪಾಯಿ ಎಂಟು ಕೋಟಿ ತೊಂಭತ್ತೈದು ಲಕ್ಷದ ಮೂವತ್ತು ಸಾವಿರದ ಮುನ್ನೂರ ಮೂವತ್ತೇಳು) ಜೊತೆಗೆ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳನ್ನು ಪಾವತಿಸಬೇಕಾಗುವುದು.
ಡಿಮ್ಯಾಂಡ್ ನೋಟಿಸ್ ದಿನಾಂಕ: 30.07.2026 ಸ್ವಾಧೀನ ತೆಗೆದುಕೊಂಡ ದಿನಾಂಕ : 03.10.2026
ಸ್ಥಿರಾಸ್ತಿಯ ವಿವರ
ಶೀರ್ಷಿಕೆದಾರರ ಹೆಸರು : (1) ಶ್ರೀ ಹರೀಶ್ ಸಿ. ಆರ್., (2) ಶ್ರೀಮತಿ ಅನಿತಾ ಜೈಕುಮಾರ್
ಸ್ಥಿರಾಸ್ತಿ: (1) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಎರಡು ಬೆಡ್‌ರೂಮ್‌ಗಳನ್ನೊಳಗೊಂಡಿರುವ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ(ಟಿ3-13-16) 1604 ಎಂದು ಕರೆಯಲ್ಪಡುವ ಮಲ್ಬೆರಿ ಟವರ್‌ನ 16 ನೇ ಮಹಡಿಯಲ್ಲಿ, 118.72 ಚದರ ಮೀಟರ್‌ನ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿರುವ "ಪಾರ್ಕ್ ವೆಸ್ಟ್" ಯೋಜನೆಯಲ್ಲಿ ಮೊದಲ ಹಂತದ ವಾಸಯೋಗ್ಯ ಅಭಿವೃದ್ಧಿಯಾಗಿದೆ ಮತ್ತು ಸುಮಾರು 1278 ಚದರ ಅಡಿ ವಿಸ್ತೀರ್ಣವನ್ನು ಹೊಂದಿದೆ ಮತ್ತು 'ಎ' ಷೆಡ್ಯೂಲ್ ಆಸ್ತಿಯಲ್ಲಿ ಒಂದು ಮುಚ್ಚಿದ ಕಾರು ಪಾರ್ಕಿಂಗ್ ಜೊತೆಗೆ ಅನುಪಾತದ ಅವಿಭಜಿತ ಪಾಲನ್ನು ಹೊಂದಿದೆ - ಪ್ರಸ್ತುತ ಮುನ್ಸಿಪಲ್ ಸಂಖ್ಯೆ 1/1, ಹೊಸಕೆರೆ ರಸ್ತೆ, ವಾರ್ಡ್ ಸಂಖ್ಯೆ 121 (ಹಳೆಯ ಸಂಖ್ಯೆ 31) ಪಿಐಡಿ ಸಂಖ್ಯೆ 31-42-1/1, ಬಿನ್ನಿಪೇಟೆ ಬೆಂಗಳೂರು - ಒಟ್ಟು ವಿಸ್ತೀರ್ಣ 52.8337 ಎಕರೆ.
(ವಿಲೀನಗೊಂಡ ಆಸ್ತಿಯಿಂದ ರಚಿಸಲಾಗಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಭಾಗದ ಪ್ರಸ್ತುತ ಮುನ್ಸಿಪಲ್ ನಂ. 1/1, ಹೊಸಕೆರೆ ರಸ್ತೆ, ವಾರ್ಡ್ ನಂ. 121 (ಹಳೆಯ ಸಂಖ್ಯೆ 31) ಪಿಐಡಿ ಸಂಖ್ಯೆ 31-42-1/1, ಬಿನ್ನಿಪೇಟೆ ಬೆಂಗಳೂರು. ಒಟ್ಟು ವಿಸ್ತೀರ್ಣ 52.8/337 ಎಕರೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಹೊಸಕೆರೆ ರಸ್ತೆ (ಸಿರ್ಸಿ ವೃತ್ತದಿಂದ ಮೈಸೂರು ರಸ್ತೆಗೆ ಟ್ಯಾಂಕ್ ಬಂಡ್ ರಸ್ತೆ) ಪಶ್ಚಿಮಕ್ಕೆ:ಗೌರಿಪಾಳ್ಯ, ರಂಗನಾಥ ಕಾಲೋನಿ, ಮತ್ತು ಹೊಸ ಬಿನ್ನಿ ಲೇಔಟ್, ಉತ್ತರಕ್ಕೆ: ಹೊಸ ಬಿನ್ನಿ ಲೇಔಟ್, ಖಾಸಗಿ ಆಸ್ತಿ ಮತ್ತು ಪುರಸಭೆ ಸಂಖ್ಯೆ 1/1 ರ ಭಾಗ ಇಟಿಎ ಕರ್ನಾಟಕ ಎಸ್ಟೇಟ್ಸ್ ಪ್ರೈಲಿಮಿಟೆಡ್ ಉಳಿಸಿಕೊಂಡಿದೆ, ದಕ್ಷಿಣಕ್ಕೆ: ಗೋರಿಪಾಳ್ಯ]
ಶೀರ್ಷಿಕೆದಾರರ ಹೆಸರು : ಶ್ರೀ ಸಿ.ಜೆ. ರಾಜಣ್ಣ
(2) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಸರ್ವೆ ನಂ. 235/1 ಈ ಆಸ್ತಿಯು ತುಮಕೂರು ಗ್ರಾಮದ ಬೆಳಗುಂಬ ಸರ್ಕಲ್ ಕಂದಾಯ ವಿಭಾಗ, ಕಸಬಾ ಹೋಬಳಿ, ತುಮಕೂರು ತಾಲ್ಲೂಕು, ವಿಸ್ತೀರ್ಣ 3 ಗುಂಟೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನರಸಿಂಹ ಮೂರ್ತಪ್ಪರವರ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಶಾರದಮ್ಮ ಕೋಂ ಡಿ ಆರ್. ಮೂರ್ತಿ ರವರ ಜಮೀನು, ದಕ್ಷಿಣಕ್ಕೆ; ನರಸಿಂಹಮೂರ್ತಿರವರ ಜಮೀನು.
ಶೀರ್ಷಿಕೆದಾರರ ಹೆಸರು : ಶ್ರೀ ವಿಪಿನ್ ಚಂದ್ರ
(3) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಅಂತರಸನಹಳ್ಳಿ ಗ್ರಾಮದ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನಲ್ಲಿರುವ, ಬೆಂಗಳೂರು ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಅಭಿವೃದ್ಧಿಪಡಿಸಿರುವ ತುಮಕೂರು ವ್ಯಾಪ್ತಿಯ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದ ಪ್ಲಾಟ್ ಸಂಖ್ಯೆ 60ರಲ್ಲಿ ನಿರ್ಮಿಸಲಾದ ಕೈಗಾರಿಕಾ ಶೆಡ್, ವಿಸ್ತೀರ್ಣ ಉತ್ತರದಿಂದ ದಕ್ಷಿಣಕ್ಕೆ; 60 ಅಡಿ , ಪೂರ್ವದಿಂದ ಪಶ್ಚಿಮಕ್ಕೆ:65 ಅಡಿ, ಮತ್ತು ಚಕ್ಕುಬಂದಿ: ಪೂರ್ವಕ್ಕೆ: 40 ಅಡಿ ಕೆಐಡಿಬಿ ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ 59, ಉತ್ತರಕ್ಕೆ: ನಿವೇಶನ ನಂ. 21, ದಕ್ಷಿಣಕ್ಕೆ: 40 ಅಡಿ ಕೆಐಡಿಬಿ ರಸ್ತೆ.
ಶೀರ್ಷಿಕೆದಾರರ ಹೆಸರು : ಶ್ರೀಮತಿ ಜಯಮ್ಮ
(4) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.76, ದೇವರಾಯಪಟ್ಟಣ ಗ್ರಾಮದ ಸರ್ವೆ ನಂ. 75ರಲ್ಲಿ ರಚಿಸಲಾಗಿದೆ. ತುಮಕೂರು ತಾಲ್ಲೂಕು, ದೇವರಾಯಪಟ್ಟಣ ಗ್ರಾಮದ ವಾರ್ಡ್ ನಂ.35ರ ವ್ಯಾಪ್ತಿಗೆ ಒಳಪಡುತ್ತದೆ. ವಾರ್ಡ್ ನಂ.35ರ ಮುನ್ಸಿಪಲ್ ಖಾತ ನಂ. 918/917/530, ಪಿಐಡಿ ನಂ. 74483, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40ಅಡಿ, ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ. 89. ಪಶ್ಚಿಮಕ್ಕೆ: 30 ಅಡಿ ರಸ್ತೆ, ಉತ್ತರಕ್ಕೆ: ನಿವೇಶನ ನಂ. 77. ದಕ್ಷಿಣಕ್ಕೆ: ನಿವೇಶನ ನಂ. 75.
ಶೀರ್ಷಿಕೆದಾರರ ಹೆಸರು : ಶ್ರೀ ಹರೀಶ್ ಸಿ ಆರ್ ಮತ್ತು ಶ್ರೀ ವಿಪಿನ್ ಚಂದ್ರ
(5) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಇಂಡಸ್ಟ್ರಿಯಲ್ ಪರಿವರ್ತಿತ ಭೂಮಿಯ ಸರ್ವೆ ನಂ. 235/5, ತುಮಕೂರು ಗ್ರಾಮದಲ್ಲಿದ್ದು, ತುಮಕೂರು ಸಿಟಿ ಕಾರ್ಪೋರೇಷನ್ ವ್ಯಾಪ್ತಿಯಲ್ಲಿದ್ದು, ಕಸಬಾ ಹೋಬಳಿ, ತುಮಕೂರಿನಲ್ಲಿದೆ. ವಿಸ್ತೀರ್ಣ 0-07.00.00 (ಏಳು ಗುಂಟೆಗಳು) ಪೂರ್ವಕ್ಕೆ: ಸರ್ಕಾರಿ ಹಳ್ಳ ಮತ್ತು ನರಸೀಯಪ್ಪರವರ ಭೂಮಿ, ಪಶ್ಚಿಮಕ್ಕೆ; ಸಾಕ್ಕಮ್ಮ ಮತ್ತು ಇತರರ ಭೂಮಿ, ಉತ್ತರಕ್ಕೆ: ಶಾರದಮ್ಮ ಕೋಂ ಡಾ. ಮೂರ್ತಿ ರವರ ಭೂಮಿ, ದಕ್ಷಿಣಕ್ಕೆ; ನರಸಿಂಹಮೂರ್ತಿರವರ ಭೂಮಿ.
ಶೀರ್ಷಿಕೆದಾರರ ಹೆಸರು : ಶ್ರೀ ಹರೀಶ್ ಸಿ ಆರ್ ಮತ್ತು ಶ್ರೀ ವಿಪಿನ್ ಚಂದ್ರ
(6) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನದ ನಂ. 108 (ಚನ್ನದಿನ್ನೆ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲ್ಲೂಕಿನ ಸರ್ವೆ ನಂ.1 ರಲ್ಲಿ ರಚಿಸಲಾಗಿದೆ) ಈ ಆಸ್ತಿಯು ಉತ್ತರ ರೈಲ್ವೆ ಮಾರ್ಗ ಮತ್ತು ಬಿ.ಹೆಚ್.ರಸ್ತೆ ಎಕ್ಸ್‌ಟೆನ್ಷನ್, ತುಮಕೂರು ಸಿಟಿ ಕಾರ್ಪೋರೇಷನ್ ವ್ಯಾಪ್ತಿಯಲ್ಲಿದೆ. ಮುನಿಸಿಪಲ್ ಖಾತಾ ನಂ.376/1871, ವಾರ್ಡ್ ನಂ.35ರ ಪಿಐಡಿ ನಂ.56295, ಉತ್ತರ ರೈಲ್ವೆ ಮಾರ್ಗ ಮತ್ತು ಬಿ.ಹೆಚ್.ರಸ್ತೆ ಎಕ್ಸ್‌ಟೆನ್ಷನ್, ತುಮಕೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ, ಉತ್ತರದಿಂದ ದಕ್ಷಿಣಕ್ಕೆ; 60 ಅಡಿ, ಪೂರ್ವಕ್ಕೆ: ನಿವೇಶನ ನಂ.107, ಪಶ್ಚಿಮಕ್ಕೆ: 109, ಉತ್ತರಕ್ಕೆ: ನಿವೇಶನ ನಂ. 112 ಮತ್ತು ನಿವೇಶನ ನಂ. 111ರ ಭಾಗ, ದಕ್ಷಿಣಕ್ಕೆ: ರೈಲ್ವೆ ಸಮಾನಾಂತರ ರಸ್ತೆ.
CERSAI ID: 400011990024, 400009227314, 400009227703, 400009227500, 400035756510

ದಿನಾಂಕ : 03.10.2026
ಸ್ಥಳ : ತುಮಕೂರು
ಸಹಿ/- ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್